Inundated waters of Bridge near Bennahalli at Harapanahalli-Kottur Road

112. Sri B. H. YENKA NAIK (Harapanahalli).—

Will the Minister for Public Works be pleased to state :—

(*a*) whether it has come to the notice of the Government that the Harijan Colony and Eswara Temple have been damaged due to inundated water on account of construction of a bridge near Bennahalli on Harapanahalli-Kottur road at a cost of Rs. 30,000;

(*b*) if so, the action taken for preventing water entering the village ;

(*c*) whether any relief will be given to the Harijans suffered from the inundated water ;

(*d*) the action taken for renovation of the Eswara temple ?

Sri BASAVARAJ MAGAVI (Deputy Minister for Public Works).—

(*a*) It is true that the water entred into Harijan Colony but it is not due to the bridge. It has not come to the notice of the Government that the Harijan Colony and Eswara temple were demaged due to this reason.

(*b*) This is under contemplation.

(*c*) No.

(*d*) Does not arise in view of reply to clause (*a*) above.

ಶ್ರೀ ಬಿ. ಎಚ್. ಯಂಕಾ ನಾಯಕ್.—ಇಲ್ಲಿ ಕಟ್ಟಿರುವ ಸೇತುವೆಯಿಂದಾಗಿ ಇಲ್ಲಿನ ದೇವಸ್ಥಾನಕ್ಕೆ ತೊಂದರೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಬಸವರಾಜ ಮಾಗವಿ.—ಇದನ್ನು ನಮ್ಮ ಅಧಿಕಾರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರು ಹೇಳುವ ಹಾಗೆ ಸೇತುವೆಯಿಂದ ಇಷ್ಟು ತೊಂದರೆ ಯಾಗಿಲ್ಲ. ಇಲ್ಲಿ ಆಗಾಗ್ಗೆ ಮಾಹಾಪೂರ ಬಂದು ನೀರು ಹರಿಜನರ ಕೇರಿಗೆ ಹಾಗೂ ದೇವಸ್ಥಾನ ದೊಳಗೆ ನುಗ್ಗಿರುವುದರಿಂದಾಗಿ ಸ್ವಲ್ಪ ತೊಂದರೆ ಆಗಿದೆ. ಮಹಾಪೂರ ಆಗಾಗ್ಗೆ ಇಲ್ಲಿ ಬರುತ್ತಲೆ ಇರುತ್ತದೆ. ಹಿಂದೆ 1966ರಲ್ಲೂ ಕೂಡ ಹೀಗೆ ಆಗಿತ್ತು. ಈ ಸಾರಿ ಮಾಹಾಪೂರ ಬಂದಾಗ ಸ್ವಲ್ಪ ಹೆಚ್ಚು ತೊಂದರೆಗೆ ಜನಗಳು ಸಿಕ್ಕಿದ್ದಾರೆ. ಇದರ ಬಗ್ಗೆ ಯಾವುದೇ ಪರಿಹಾರ ಕೊಡಬೇಕಾದರೂ ಪಿ. ಡಬ್ಯು. ಇಲಾಖೆಗೆ ಅವಕಾಶ ಇಲ್ಲ. ಇದರ ಬಗ್ಗೆ ಇಲ್ಲ ಜನರು ರೆವೆನ್ಯೂ ಇಲಾಖೆಗೆ ಬರೆದು ಕೊಂಡು ಪರಿಹಾರ ಬೇಕೆಂದು ಕೇಳಿದರೆ ಆಗ ರೆವೆನ್ಯೂ ಇಲಾಖೆಯವರು ನೋಡಿಕೊಂಡು ಸೂಕ್ತ ಪರಿಹಾರ ಕೊಡುವುದರ ಬಗ್ಗೆ ಯೋಚನೆ ಮಾಡಬಹುದು. ಸೇತುವೆಯಿಂದ ಇಲ್ಲಿ ಇಷ್ಟು ಹಾನಿ ಯಾಗಿದೆ ಎಂದು ಹೇಳುವುದು ಸರಿಯಲ್ಲ. ಇದರಲ್ಲಿರುವ ವೆಂಟ್ ಸ್ವಲ್ಪ ಶಿಥಿಲವಾಗಿರುವುದರಿಂದ ಸರಕಾರ ಇದನ್ನು ಗಮನದಲ್ಲಿಟ್ಟುಕೊಂಡು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದೆ.

ಶ್ರೀ ಎಂ. ಎಂ. ಸದ್ಯೋಜಾತಪ್ಪ.—ಇಲ್ಲಿ ಕಟ್ಟಿರುವ ಸೇತುವೆಗೆ ಕಟ್ಟಿರುವ ಕಾಸ್‌ವೇ ಸರಿಯಾಗಿಲ್ಲದುದರಿಂದ ಇಲ್ಲಿ ಹೆಚ್ಚು ಹಾನಿಯಾಗಿದೆ ಎಂದು ತಿಳಿದುಬರುತ್ತದೆ. ಇದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಮಂತ್ರಿಗಳು ಸರಿಯಾಗಿ ವಿಮರ್ಶೆ ಮಾಡಿದ್ದಾರೆಯೇ ?

ಶ್ರೀ ಬಸವರಾಜ ಮಾಗಾವಿ.—ಹಿಂದೆ ಕೂಡ ಮಹಾಪೂರ ಬಂದು ನೀರು ಹರಿಜನ ಕೇರಿಗೆ ಹಾಗೂ ಇಲ್ಲಿರುವ ದೇಸ್ಥಾನಕ್ಕೆ ನುಗ್ಗಿ ಇಲ್ಲಿನ ಜನಕ್ಕೆ ತೊಂದರೆಯಾಗಿದೆ ಎಂದು ತಿಳಿದುಬಂದಿದೆ. ಮಾನ್ಯ ಸದಸ್ಯರು ಹೇಳುವಹಾಗೆ ಸೇತುವೆ ಕಟ್ಟಿರುವುದರಿಂದ ತೊಂದರೆಯಾಗಿದೆ ಎಂದು ಹೇಳಲಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಂ. ಸದ್ಯೋಜಾತಪ್ಪ.—ಮಾನ್ಯ ಮಂತ್ರಿಗಳು ಇಲ್ಲಿರುವ ಸ್ಥಳವನ್ನು ಹೋಗಿ ನೋಡಿಕೊಂಡು ತನಿಖೆ ಮಾಡಿ ಬಂದಿದ್ದಾರೆಯೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಆಗ್ರಹ ಮಾಡಿದರೆ ಹೋಗಿ ನೋಡಿ ಬರ ಬಹುದು. ಆದರೆ ನನಗೆ ಬಂದಿರುವ ವಿವರವಾದ ವರದಿಗಳ ಆಧಾರದ ಮೇಲೆ ನಾನು ಇಲ್ಲಿ ಹೇಳುತ್ತಿರುವುದು ಇಲ್ಲಿರುವ ಸೇತುವೆಯಿಂದ ಅಷ್ಟು ಹಾನಿಯಾಗಿಲ್ಲ. ಮಹಾಪೂರದಿಂದ ಆಗಾಗ್ಗೆ ಹಾನಿ ಆಗುತ್ತಿದೆ ಎಂದು ಹೇಳಬಹುದು.

ಶ್ರೀ ಬಿ. ಎಚ್. ಯಂಕಾ ನಾಯಕ್.—ಇಲ್ಲಿರುವ ಸೇತುವೆಯ ಮೇಲೆ ಒಡ್ಡನ್ನು ಪಿ.ಡಬ್ಯು.ಡಿ. ಇಲಾಖೆಯವರು ಕಟ್ಟಿರುವುದರಿಂದಾಗಿ ಇಷ್ಟು ತೊಂದರೆಗೆ ಒಳಗಾಗಿದೆ ಅಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಒಡ್ಡನ್ನು ಮೊದಲು ಸೇತುವೆ ಕಟ್ಟುವಾಗ ಹಾಕಿತ್ತು. ಇದನ್ನು ಬಂಡ್ ಪ್ರೊಟೆಕ್ಷನ್‌ಗಾಗಿ ಮಾಡಲಾಗಿತ್ತು. ಇದರ ಕಾಸ್ ವೇ ಇಲ್ಲಿ ಸ್ಕವರ್ ಔಟ್ ಆಗಿದೆ ಎಂದು ವರದಿ ಬಂದಿದೆ. ಇದನ್ನು ನರಿ ಮಾಡಲು ಪ್ಲಾನು ಎಸ್ಟಿಮೇಟುಗಳನ್ನು ಮಾಡಲು ಇಲ್ಲಿನ ಎಕ್ಸಿಕ್ಯುಟೀವ್ ಇಂಜನೀಯರವರ ಕಡೆಗೆ ಸೂಚನೆಗಳನ್ನು ಕೊಡಲಾಗಿದೆ.

ಶ್ರೀ ಎಂ. ಎಂ. ಸದ್ಯೋಜಾತಪ್ಪ.—ಮಾನ್ಯ ಮಂತ್ರಿಗಳು ಒಂದು ಸಾರಿ ಇಲ್ಲಿಗೆ ಖುದ್ದಾಗಿ ಹೋಗಿ ಇನ್ಸ್‌ಪೆಕ್ಟ್ ಮಾಡಿಕೊಂಡು ಬಂದು ಇಲ್ಲಿ ಹೇಳುತ್ತಾರೆಯೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಆಗ್ರಹಪಡಿಸಿದರೆ ನಾನು ಹೋಗಿ ಬರಲೂ ಸಿದ್ಧ. ಇಲ್ಲಿ ನನಗೆ ಬಂದಿರುವ ವರದಿಯಂತೆ ಇದರ ಅವಶ್ಯಕತೆ ಅಷ್ಟು ಕಂಡುಬರುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಇಲ್ಲಿರುವ ಕಾಸ್‌ವೇ ಸ್ಕವರ್ ಔಟ್ ಆಗಿದೆ ಇದನ್ನು ರಿಪೇರಿ ಮಾಡುವ ಅಗತ್ಯ ಇದೆ. ಆದರೂ ಮಾನ್ಯ ಸದಸ್ಯರು ಹೇಳುತ್ತಿರುವುದರಿಂದ ಇದನ್ನು ಒಮ್ಮೆ ನೋಡಿಕೊಂಡು ಬರುತ್ತೇನೆ.

Distribution of rice to card holders in belt area of Kerala Border

120. Sri B. M. IDINABBA (Mangalore-2).—

Will the Minister of State for Food and Civil Supplies be pleased to state :—

(*a*) the names of the Taluks of South Kanara district in the belt area adjoining Kerala State ;

(*b*) the number of shops in the belt area of the border to which permits have been issued for distribution of rice to consumers ;

(*c*) out of these, the number of Co-operative Societes the number of Co-operative stores and number of private shops ;

(*d*) the number and names of Taluks in which such Co-operative Stores are there ;

(*e*) the steps taken to verify whether or not these permit-holders are distributing rice to card holders only ?